MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 3-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಭಾರತದ ಸಕ್ಕರೆ ಉತ್ಪಾದನೆ 12 ಮಿಲಿಯನ್ ಟನ್ (2022 ಅಕ್ಟೋಬರ್ ನಿಂದ ಡಿಸೆಂಬರ್ ಅಂತ್ಯಕ್ಕೆ)**

2022 ಅಕ್ಟೋಬರ್ ನಿಂದ ಡಿಸೆಂಬರ್ ಅಂತ್ಯದ ತನಕ ಭಾರತದ ಸಕ್ಕರೆ ಉತ್ಪಾದನೆ 120 ಲಕ್ಷ ಟನ್‌ಗಳಾಗಿವೆಯೆಂದು ISMA ಪ್ರಕಟಿಸಿದೆ. ಹಿಂದಿನ ಸಾಲಿನ ಇದೇ ಅವಧಿಯಲ್ಲಿ ದೇಶದ ಉತ್ಪಾದನೆ 116.4 ಲಕ್ಷ ಟನ್‌ಗಳಾಗಿತ್ತೆನ್ನಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯ ಉತ್ಪಾದನೆಗಿಂತ 3.6 ಲಕ್ಷ ಟನ್ ಹೆಚ್ಚುವರಿ ಉತ್ಪಾದನೆಯಾಗಿದೆ. ಬೇಸಿಗೆ, ಸಮಾರಂಭ ಹಾಗೂ ಹಬ್ಬಗಳ ಸೀಸನ್ ಆಗಿರುವುದರಿಂದ ಬೇಡಿಕೆ ಹೆಚ್ಚಳವಾಗುವ ಸಂಭವವಿದೆ.

**ಕಚ್ಚಾ ಗೋಡಂಬಿ ಉತ್ತಮ ಬೆಳೆ ನಿರೀಕ್ಷೆ**

ಈ ವರ್ಷದ ವಾತಾವರಣ ಪಶ್ಚಿಮ ಕರಾವಳಿಯಾದ್ಯಂತ ಗೋಡಂಬಿ ಬೆಳೆಗೆ ಪೂರಕವಾಗಿದೆ. ಸಾಮಾನ್ಯ ಉತ್ಪಾದನಾ ಸೀಸನ್‌ಗಳಂತೆಯೇ ಆರಂಭದಲ್ಲೇ ಗಿಡಮರಗಳು ಹೂ ಬಿಟ್ಟದ್ದು ಹಿಂದಿನ ವರ್ಷದ ಅವಧಿಗಿಂತ ಮುಂಚಿತವಾಗಿ ಹೊಸ ಬೆಳೆಯ ಗೋಡಂಬಿ ಮಾರುಕಟ್ಟೆಗೆ ಆವಕವಾಗುವ ನಿರೀಕ್ಷೆಯಿದೆ. ಉತ್ತಮ ವಾತಾವರಣವಿರುವುದರಿಂದ ಈ ವರ್ಷ ಉತ್ತಮ ಉತ್ಪಾದನೆಯ ನಿರೀಕ್ಷೆಯಿದೆ. ಹಿಂದಿನ ವರ್ಷ ಪ್ರತಿಕೂಲ ಹವಾಮಾನದಿಂದ ಉತ್ಪಾದನೆ ಕುಂಠಿತವಾಗಿತ್ತು. ಗೋಡಂಬಿ ತಿರುಳು ದೇಶೀ ಬಳಕೆ ಉತ್ತಮವಿದ್ದು, ಹಿಂದಿನ ವರ್ಷ ಕಚ್ಚಾ ಗೋಡಂಬಿ ಆಮದು ಹೆಚ್ಚಳ ಕಂಡಿದೆಯೆನ್ನಲಾಗಿದೆ.